# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570 006

### ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ

**ಸಂಖ್ಯೆ: ಕರಾಮುವಿ/ಕಅಮಸಂವಿ/ಕಾನಿ–04/2025–26** **ದಿನಾಂಕ: 02–08–2025**

**ಸುತ್ತೋಲೆ**

**ವಿಷಯ:** 2024–25ನೇ ಶೈಕ್ಷಣಿಕ ಸಾಲಿನ ಸಂಶೋಧನಾ ವಿದ್ಯಾರ್ಥಿಗಳಿಗೆ **‘ವಿಭಾಗದ ಸಂಶೋಧನಾ ಸಮಿತಿ’ (DRC)** ಸಂದರ್ಶನಕ್ಕೆ ಹಾಜರಾಗುವ ಬಗ್ಗೆ.

* * * * *

2024–25ನೇ ಶೈಕ್ಷಣಿಕ ಸಾಲಿನ ಪಿಎಚ್.ಡಿ ಸಂದರ್ಶನಕ್ಕೆ ಅರ್ಹರೆನಿಸುವ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನವನ್ನು **ದಿನಾಂಕ: 12–08–2025 ಮತ್ತು ದಿನಾಂಕ: 13–08–2025** ರವರೆಗೆ ಮಾನಸ ಕಟ್ಟಡ, ಅಧ್ಯಕ್ಷರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರಿನಲ್ಲಿ ನಡೆಸಲಾಗುವುದು. ಸದರಿ ಸಂದರ್ಶನವನ್ನು ನಿಗದಿಗೊಳಿಸಿರುವ ದಿನದಂದು ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.30 ಘಂಟೆ ಮತ್ತು 2.30 ರಿಂದ 5.30 ಘಂಟೆವರೆಗೆ ನಡೆಯುತ್ತದೆ. ಮೌಖಿಕ ಸಂದರ್ಶನಕ್ಕೆ ಈ ಕೆಳಕಂಡ ಸೂಚಿಸಿರುವ ದಿನಾಂಕದಂದು ಹಾಜರಾಗುವ ಅಭ್ಯರ್ಥಿಗಳು ಇಲ್ಲಿ ತೋರಿಸಿರುವ ದಾಖಲೆಗಳೊಂದಿಗೆ ಬರಲು ಈ ಮೂಲಕ ತಿಳಿಸಲಾಗಿದೆ.

1. ಆಧಾರ್ ಕಾರ್ಡ್
2. ವರ್ಗ/ಜಾತಿ ಪ್ರಮಾಣ ಪತ್ರ
3. ಎಸ್.ಎಸ್.ಎಲ್.ಸಿ ಅಂಕಪಟ್ಟಿ
4. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಎಲ್ಲಾ ಮೂಲ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು.
5. ಯು.ಜಿ.ಸಿ–ನೆಟ್/ಜೆ.ಆರ್.ಎಫ್/ಎಂ.ಫಿಲ್ ಪ್ರಮಾಣ ಪತ್ರಗಳು.
6. ಸಂಶೋಧನಾರ್ಥಿಗಳು ಈಗಾಗಲೇ ತಮ್ಮಗಳ ಪಿಎಚ್.ಡಿ. ಸಂಶೋಧನೆಗಾಗಿ ಸ್ವತಃ ಆಯ್ಕೆ ಮಾಡಿಕೊಂಡಿರುವ (ಅರ್ಜಿಗಳಲ್ಲಿ ಉಲ್ಲೇಖಿಸಿರುವ) ವಿಷಯ ಅಥವಾ ಮುಂದೆ ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಿರುವ ವಿಷಯದ ಬಗ್ಗೆ ಎರಡು ಸಾರಲೇಖ (Synopsis - ಆರು ಪುಟಗಳಿಗೆ ಕಡಿಮೆಯಿಲ್ಲದಂತೆ) ಸಿದ್ಧಪಡಿಸಿ ಡಿಟಿಪಿ ಮಾಡಿಸಿ, ಆರು ಪ್ರತಿಗಳನ್ನು ಸಂದರ್ಶನಕ್ಕೆ ಕಡ್ಡಾಯವಾಗಿ ತರುವುದು.
7. ಸ್ನಾತಕೋತ್ತರ ಪದವಿಗಳಲ್ಲಿ ವಿಶೇಷವಾಗಿ ಅಧ್ಯಯನ ಮಾಡಿರುವ (ಐಚ್ಛಿಕ) ವಿಷಯ ಮತ್ತು ತಾವು ಆಯ್ಕೆ ಮಾಡಿಕೊಂಡಿರುವ ಸಂಶೋಧನಾ ಕ್ಷೇತ್ರದ ಕುರಿತು ಅಭ್ಯರ್ಥಿಗಳು ಅಧ್ಯಯನ ಮಾಡಿಕೊಂಡು ಸಂದರ್ಶನಕ್ಕೆ ಹಾಜರಾಗುವಂತೆ ಸೂಚಿಸಿದೆ.
8. ಈಗಾಗಲೇ ಪ್ರಕಟವಾಗಿರುವ ಸಂಶೋಧನೆ/ವಿಮರ್ಶೆ ಇತ್ಯಾದಿ ಲೇಖನಗಳು ಹಾಗೂ ಪ್ರಕಟಿತ ಪುಸ್ತಕಗಳು ಇದ್ದರೆ, ಅವುಗಳ ಒಂದೊಂದು ಪ್ರತಿಯನ್ನು ತರುವಂತೆಯು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ನೋಡುವುದು.

**ಅಧ್ಯಕ್ಷರು**
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು–06

ವಿದ್ಯಾರ್ಥಿ ಹೆಸರು:

ದಿನಾಂಕ: –08–2023